# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI






**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**

Postal Regd. No. MNG / 1023 / 2018-20
Date of Posting, Kodialbail Post Office
on 12th of every Month

ಸಂಪುಟ-9 Reg. No. : KARBIL/2005/16123 ಒಕ್ಟೋಬರ್ - 2020 ಪುಟ:8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ-10 ಪ್ರಕಟಣೆ : 10-10-2020



● e-mail : jnanashakthisss@gmail.com ● whatsapp : 7795116598 ● Mobile : 9343361618

## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ
## ಅನುಗ್ರಹ ಸಂದೇಶ

ತಂದೆ-ತಾಯಿ ಹಾಗೂ ಉಪಾಧ್ಯಾಯರು, ಜೀವನದ ಪ್ರತಿ ಹೆಜ್ಜೆಯಲ್ಲಿಯೂ ಮಾರ್ಗದರ್ಶಕರಾಗಿ, ಪ್ರಗತಿಯ ದಾರಿಯಲ್ಲಿ ಜನರನ್ನು ಮುನ್ನಡೆಸುವ ವಿಚಾರವು ಎಲ್ಲರಿಗೂ ತಿಳಿದಿರುವುದೇ ಆಗಿದೆ. ಇದು ಪ್ರತಿಯೊಬ್ಬರೂ ಪ್ರಶಂಸೆ ಮಾಡಬೇಕಾದ ಸಂಗತಿಯಾಗಿದೆ. ಹಿರಿಯರ ಮಾರ್ಗದರ್ಶನದಂತೆ ನಡೆದುಕೊಂಡರೆ ಪ್ರತಿಯೊಬ್ಬರೂ ಶ್ರೇಯಸ್ಸನ್ನು ಹೊಂದಬಹುದು.

ಬದುಕಿನಲ್ಲಿ ಮುನ್ನಡೆಯುವಾಗ ಯುಕ್ತಾಯುಕ್ತ ವಿವೇಚನೆಯು ಉದಯಿಸಿ ಮನುಷ್ಯನು ಸರಿ ಮತ್ತು ತಪ್ಪು ಯಾವುದೆಂದು ತೀರ್ಮಾನಿಸಲು ಶಕ್ತನಾಗುತ್ತಾನೆ. ಸೂಕ್ತ ಸಮಯದಲ್ಲಿ ತಪ್ಪನ್ನು ತಿದ್ದಿಕೊಂಡು ಸರಿಯಾದ ಮಾರ್ಗದಲ್ಲಿ ನಡೆಯಲು ಅವಕಾಶಗಳು ಲಭ್ಯವಾಗುತ್ತವೆ. ಅಂತಹ ಸಂದರ್ಭಗಳ ಸದುಪಯೋಗವನ್ನು ಮನುಷ್ಯನು ಮಾಡಿಕೊಳ್ಳಬೇಕು. ಶ್ರೀಮದ್ ಭಾಗವತದಲ್ಲಿ ಭಗವಂತನು ಈ ವಿಚಾರವನ್ನೇ ತಿಳಿಸಿರುತ್ತಾನೆ.

**ದುಃಖೋದರ್ಕೇಷು ಕಾಮೇಷು ಜಾತನಿರ್ವೇದ ಆತ್ಮವಾನ್ ।**
**ಅಜಿಜ್ಞಾಸಿತಮದ್ಧರ್ಮೋ ಮುನಿಂ ಗುರುಮುಪವ್ರಜೇತ್ ॥**

ಪ್ರಾಪಂಚಿಕ ವಿಷಯಗಳಲ್ಲಿ ನಿರಾಸಕ್ತನಾದವನಿಗೆ ಅವುಗಳು ಕೇವಲ ದುಃಖವನ್ನೇ ಉಂಟುಮಾಡುತ್ತವೆ ಎಂದು ತಿಳಿದಿರುತ್ತದೆ. ಆದರೆ, ಆತ್ಮಜ್ಞಾನವನ್ನು ಪಡೆಯಲು ಜ್ಞಾನಿಯಾದ ಗುರುವನ್ನು ಆಶ್ರಯಿಸಿ, ಶ್ರದ್ಧೆಯಿಂದ ಆತನ ಸೇವೆಯನ್ನು ಮಾಡಬೇಕು.

ಈ ರೀತಿಯಾಗಿ ಗುರುವಿನ ಸೇವೆ ಮಾಡಿ ಇಹ ಮತ್ತು ಪರಗಳಲ್ಲಿ ಸುಖವನ್ನು ಹೊಂದುತ್ತಾನೆ.

ಪ್ರತಿಯೊಬ್ಬರೂ ಈ ಸಂದೇಶವನ್ನು ಅರ್ಥಮಾಡಿಕೊಂಡು ಸಾರ್ಥಕ ಜೀವನವನ್ನು ನಡೆಸುವಂತೆ ಆಗಲಿ ಎಂದು ಆಶೀರ್ವದಿಸುತ್ತಿದ್ದೇವೆ.

**ಕೃಪೆ : 'ಶ್ರೀ ಶಂಕರ ಕೃಪಾ'**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು, ಮಹಿಳಾ ವೇದಿಕೆಯ ವತಿಯಿಂದ ಕುಮಾರಿ ನಿಧಿ ರಾವ್‌ಗೆ ಸನ್ಮಾನ







ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರಿನಲ್ಲಿ ತಾ. 26-09-2020ರಂದು ಮಹಿಳಾ ವೇದಿಕೆ ವತಿಯಿಂದ ಈ ಬಾರಿಯ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದ ಶ್ರೀಮತಿ ಸ್ವಪ್ನಾ ರಾವ್ ಮತ್ತು ಶ್ರೀ ಜಯಚಂದ್ರ ರಾವ್ ಇವರ ದ್ವಿತೀಯ ಪುತ್ರಿ ಕು। ನಿಧಿ ರಾವ್‌ರವರನ್ನು ಸನ್ಮಾನಿಸಲಾಯಿತು. ಕು। ನಿಧಿ ರಾವ್ ಕೆನರಾ ಹೈಸ್ಕೂಲಿನ ವಿದ್ಯಾರ್ಥಿನಿ. ಉನ್ನತಶ್ರೇಣಿಯನ್ನು ಗಳಿಸಿ ನಮ್ಮ ಸಮಾಜಕ್ಕೆ ಗೌರವ ತಂದ ಪ್ರತಿಭಾವಂತಳಾಗಿದ್ದಾಳೆ.

ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಗಣ್ಯರ ಸಮ್ಮುಖದಲ್ಲಿ **ಕು। ನಿಧಿ ರಾವ್**‌ರವರಿಗೆ ಶಾಲು ಹೊದಿಸಿ, ಫಲಪುಷ್ಪ, ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಈ ಸಮಾರಂಭದಲ್ಲಿ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಯುವವೇದಿಕೆ ಅಧ್ಯಕ್ಷ ಶ್ರೀ ಮನೀಶ್ ರಾವ್ ಇತರ ಪದಾಧಿಕಾರಿಗಳು, ಕು। ನಿಧಿ ರಾವ್‌ರವರ ಮಾತಾಪಿತೃಗಳು, ಸಹೋದರಿ ಉಪಸ್ಥಿತರಿದ್ದರು. ಕು। ನಿಧಿ ರಾವ್ ತನ್ನನ್ನು ಅಭಿನಂದಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದಳು. ಮಹಿಳಾ ವೇದಿಕೆ ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಧನ್ಯವಾದ ಸಮರ್ಪಿಸಿದರು.

**ಚಿತ್ರ : ಶ್ರೀ ರಘುವೀರ್ ಪೆರ್ಡೂರು** **ವರದಿ : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ✆ : 9739155359**

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್, ಪುತ್ತೂರು**
ಮೊಬೈಲ್ : 9448481696


ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ, ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ, ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು : **ಹರ್ಷಕುಮಾರ್ ಕೇದಿಗೆ**

ನನಗೆ ನಿಮ್ಮ ಕುರಿತು ಅದೆಂಥದೋ ಒಂದು ವಿಶೇಷ ಸೆಳೆತ. ನಿಮ್ಮ ನಿಲುವು, ಆದರ್ಶ, ಮಾತುಗಾರಿಕೆ, ಜೀವನಶೈಲಿ ನಮ್ಮನ್ನು ಆಪ್ತರನ್ನಾಗಿಸಿರುವುದಲ್ಲದೆ, ನಾವು ಈ ವಿಶ್ವದ ಚಿಕ್ಕ ಕುಟುಂಬದಲ್ಲಿದ್ದೇವೆ ಎಂಬ ಆಪ್ಯಾಯ ಭಾವನೆ ಆವರಿಸಲು ಕಾರಣರಾಗಿದ್ದೀರಿ.

*– ಜಾರ್ಜ್ ಬರ್ನಾರ್ಡ್ ಷಾ (ಗಾಂಧೀಜಿಯವರನ್ನು ಕುರಿತು)*

# ಸ್ಥಾನಿಕ ಬ್ರಾಹ್ಮಣ ಪುರೋಹಿತರ ಸಂಘದ ಉದ್ಘಾಟನೆ

**ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ – ಅರ್ಚಕ ಪರಿಪಾಲನಾ ಸಭಾ ಮಂಗಳೂರು ಇದರ ಉದ್ಘಾಟನೆಯು ದಿನಾಂಕ 4–10–2020 ಭಾನುವಾರದಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜರುಗಿತು.**

ಪೂರ್ವಾಹ್ನ ಘಂಟೆ 7–00ಕ್ಕೆ ದ್ವಾದಶ ನಾರಿಕೇಳ ಗಣಯಾಗ ಹಾಗೂ ಐಕ್ಯಮತ್ಯ ಸೂಕ್ತ ಜಪ, ಹೋಮದೊಂದಿಗೆ ಪ್ರಾರಂಭವಾಯಿತು. ಶ್ರೀ ಮಹಾಗಣಪತಿ ಹೋಮದ ಪವಿತ್ರಪಾಣಿಯಾಗಿ ಶ್ರೀಮತಿ ಪುಷ್ಪಲತಾ ಮತ್ತು ಶ್ರೀ ಶ್ರೀನಿವಾಸ ದಂಪತಿಗಳು, ಐಕ್ಯಮತ್ಯ ಸೂಕ್ತ ಹೋಮದ ಪವಿತ್ರಪಾಣಿಯಾಗಿ ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಕೇದಿಗೆ ಹರ್ಷಕುಮಾರ್ ದಂಪತಿಗಳು ತಮ್ಮನ್ನು ತೊಡಗಿಸಿಕೊಂಡು ನಮಗೆ ಪೂರ್ಣ ಸಹಕಾರವಿತ್ತರು. ವೇದಮೂರ್ತಿ ಕೃಷ್ಣರಾಜ ಭಟ್ ಮತ್ತು ವೇದಮೂರ್ತಿ ಸುಬ್ರಹ್ಮಣ್ಯ ಭಟ್ ಅವರ ವೇದಘೋಷ, ಮಾತೆಯರ ಪ್ರಾರ್ಥನೆ ಹಾಗೂ ವೇದಮೂರ್ತಿ ಪ್ರಶಾಂತ ಶರ್ಮಾ ಮತ್ತು ವೇದಮೂರ್ತಿ ಹರೀಶ್ ಭಟ್ ಹೊಸ್ಮಾರು ಇವರ ಗುರುವಂದನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು.

ಅಭ್ಯಾಗತರ ಕಿರುಪರಿಚಯದೊಂದಿಗೆ ಸ್ವಾಗತವನ್ನು ಸಂಘದ ಅಧ್ಯಕ್ಷರಾದ ವೇದಮೂರ್ತಿ ಗುರುಪ್ರಸಾದ್ ಹೆಬ್ಬಾರ್ ನೆರವೇರಿಸಿದರು. ಸಂಘ ಹುಟ್ಟಿದ ಬಗ್ಗೆ ಅದನ್ನು ಪೋಷಿಸಿ ಪ್ರೋತ್ಸಾಹಿಸಿದವರನ್ನು ವಂದಿಸಿ, ಸಂಘದ ಧ್ಯೇಯೋದ್ದೇಶದ ಬಗ್ಗೆ ಕಾರ್ಯದರ್ಶಿ ವೇದಮೂರ್ತಿ ಚಿದಾನಂದ ಶ್ಯಾನುಭೋಗರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಮಂಡಿಸಿದರು.

ದೀಪ ಪ್ರಜ್ವಲನ ಮೂಲಕ ವೇದಮೂರ್ತಿ ಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯರು ಸಂಘವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಆ ಸಮಯದಲ್ಲಿ ವೇದಮೂರ್ತಿ ಜಗದೀಶ ಉಪಾಧ್ಯಾಯರು ಹಾಗೂ ವೇದಮೂರ್ತಿ ರಂಗನಾಥ ಭಟ್ ವೇದಘೋಷ ಮೊಳಗಿಸಿದರು. ಪ್ರಧಾನ ಉಪನ್ಯಾಸಕರಾದ ವೇದಬ್ರಹ್ಮ ವಿದ್ಯಾವಾರಿಧಿ ಋಗ್ವೇದ ಸಲಕ್ಷನ ಘನಪಾಠಿ ವ್ಯಾಕರಣ



ವಿದ್ವಾನ್ ಡಾ। ಸತ್ಯಕೃಷ್ಣ ಭಟ್ ಅವರು ಬ್ರಾಹ್ಮಣ ಮತ್ತು ಬ್ರಾಹ್... ರಕ್ಷಣೆ ಬಗ್ಗೆ ಮನಮುಟ್ಟುವಂತೆ ವಿಷಯ ಮಂಡಿಸಿದರು. ಶೃ... ಮಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ವೇ... ವಾಗೀಶ ಶಾಸ್ತ್ರಿಯವರು ಸಂಘ ಮುನ್ನಡೆಸಿಕೊಂಡು ಹೋ... ಬೇಕಾದ ಅಗತ್ಯ ಸಲಹೆಗಳನ್ನು ನೀಡಿ ಪ್ರೋತ್ಸಾಹಿಸಿದರು.

ಸಂಘದ ಅಧ್ಯಕ್ಷರು 'ಧರ್ಮಪ್ರಸಾರ ನಿಧಿ' ಹಾಗೂ 'ಆಪ... ನಿಧಿ'ಯನ್ನು ಪ್ರಕಟಿಸಿದರು. ಉದ್ಘಾಟನೆಗೈದ ವೇದ... ಭವಾನಿಶಂಕರ ಉಪಾಧ್ಯಾಯರು ಧರ್ಮಪ್ರಸಾರ ನಿಧಿಗೆ ರೂ... ಒಂದು ಲಕ್ಷ ದೇಣಿಗೆ ನೀಡಿದರು. ವೇದಬ್ರಹ್ಮ ವಾಗೀಶ ಶಾಸ್ತ್ರಿ... ಆದಿಯಾಗಿ ಇನ್ನೂ ಹಲವರು ದೇಣಿಗೆಯನ್ನು ನೀಡಿ... ಸಭಾಧ್ಯಕ್ಷರಾದ ಶ್ರೀ ಜಗನ್ನಿವಾಸ ರಾಯರು ಪುರೋಹಿತರು... ಸ್ಥಾನವನ್ನು ಕಾಪಾಡಿಕೊಂಡು ಹೋಗಬೇಕು ಎಂ... ವೇದಮೂರ್ತಿ ಜಗದಾಭಿರಾಮ ಸ್ವಾಮಿಯವರು ಧನ್ಯ... ಸಮರ್ಪಣೆಯನ್ನು ಸಲ್ಲಿಸಿದರು.

ಶ್ರೀ ಕರುಣ್ ರಾವ್ ಬೆಳ್ಳೆಯವರು ಮಾಡಿದ ಕಾರ್ಯಕ್ರ... ಅಚ್ಚುಕಟ್ಟಾದ ವ್ಯವಸ್ಥೆ ಹೃದಯಸ್ಪರ್ಶಿಯಾಗಿತ್ತು. ಕಾರ್ಯಕ್ರ... ಸಂಪೂರ್ಣ ಪ್ರಾಯೋಜಕತ್ವವನ್ನು ಶ್ರೀ ಸುಬ್ರಹ್ಮಣ್ಯ ಸಭಾ... ಮಂಗಳೂರು ಇವರು ವಹಿಸಿಕೊಂಡಿದ್ದರು. ಕಾರ್ಯಕ್ರ... ನಿರೂಪಣೆಯನ್ನು ವೇದಮೂರ್ತಿ ಪ್ರತಾಪ್ ಶರ್ಮಾ... ನಿರ್ವಹಿಸಿದರು.

## ಪ್ರಸ್ತುತ ಕೋವಿಡ್ ಸಂಕಷ್ಟ ಸಮಯದಲ್ಲಿ ನಮ್ಮ ಸಮಾಜದ ದೇವಸ್ಥಾನ, ಪುರೋಹಿತ, ಅರ್ಚಕವರ್ಗಕ್ಕೆ ನೀಡಿರುವ ಧನಸಹಾಯದ ವಿವರ

**ತಲಾ ರೂಪಾಯಿ 10,000/–ದಂತೆ ದೇವಸ್ಥಾನಗಳಿಗೆ**

1) **ಶ್ರೀ ಅನಂತ ಪದ್ಮನಾಭ ಎಮ್.**
ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ, ಧರ್ಮಶಾಲೆ ಬಾರ್ಕೂರು, ಬ್ರಹ್ಮಾವರ
2) **ಶ್ರೀ ಸುಬ್ರಾಯ ಶ್ಯಾನುಭೋಗ್**
ಶ್ರೀ ಭಗವತಿ ದುರ್ಗಾಪರಮೇಶ್ವರೀ ದೇವಸ್ಥಾನ ಕೆರ್ಗಾಲು, ಬೈಂದೂರು
3) **ಶ್ರೀ ನಿರಂಜನ ಬಿ.**
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಬಂದಜ, ಕಡಬ
4) **ಶ್ರೀ ಜ್ಞಾನೇಶ್ ರಾವ್**
ಶ್ರೀ ಶಂಕರನಾರಾಯಣ ದೇವಸ್ಥಾನ, ನಾಲೂರು, ಕಡಬ
5) **ಶ್ರೀ ಗೋವಿಂದರಾಜ್**
ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಕೊರಿಕೆಬೆಟ್ಟು ಮೂಡ್ಕೂರು, ಕಾರ್ಕಳ
6) **ಶ್ರೀ ಜಗದಾಭಿರಾಮ ಸ್ವಾಮಿ**
ಶ್ರೀ ಪ್ರಸನ್ನ ಪಾರ್ವತೀ ಬಾಲಗಣಪತಿ ದೇವಸ್ಥಾನ ಉದಯಾದ್ರಿ ಮಠ, ಪಡುಬಿದ್ರಿ
7) **ಶ್ರೀ ಪ್ರಸನ್ನ ಶ್ಯಾನುಭೋಗ್**
ಶ್ರೀ ವಿಷ್ಣುಮಂಗಳ ದೇವಸ್ಥಾನ ಕೂಡ್ಲು, ಕಾಸರಗೋಡು
8) **ಶ್ರೀ ಬಿ. ಸೂರ್ಯನಾರಾಯಣ ಭಟ್**
ಭಟ್ರಪ್ಪಾಡಿ, ಪುತ್ತೂರು
9) **ಶ್ರೀ ಸುಧಾಕರ ಬೆಳ್ಳೆ**
ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು ಪಡುಬಿದ್ರಿ
10) **ಶ್ರೀ ಭರತೇಶ್ ಟಿ.**
ಶ್ರೀ ಶ್ರೀನಿವಾಸ ದೇವಸ್ಥಾನ, ತಲೇಕಿ, ಕಡಬ
11) **ಶ್ರೀ ಕಿರಣ ರಾವ್**
ಶ್ರೀ ವೆಂಕಟ್ರಮಣ ಮಠ, ನೆಟ್ಲ, ಕಲ್ಲಡ್ಕ, ಬಂಟ್ವಾಳ
12) **ಶ್ರೀ ನಾಗೇಶ ಶರ್ಮ**
ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಮಠಂತಬೆಟ್ಟು ಕೋಡಿಂಬಾಡಿ, ಪುತ್ತೂರು
13) **ಶ್ರೀ ಸದಾನಂದ ಭಟ್**
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕಾಂತಮಂಗಲ... ಅಜ್ಜಾವರ, ಸುಳ್ಯ
14) **ಶ್ರೀ ಶ್ರೀವತ್ಸ ಎಮ್. ವಿ.**
ಶ್ರೀ ತ್ರಿಶೂಲಿನಿ ದೇವಸ್ಥಾನ, ಬಳ್ಪ, ಪಂಜ, ಕ...
15) **ಶ್ರೀ ನಿರಂಜನ ಬಿ.**
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಬದಂಜ, ಕಡಬ...
16) **ಶ್ರೀ ಸುದರ್ಶನ ರಾವ್**
ಶ್ರೀ ಈಶ್ವರ ದೇವಸ್ಥಾನ, ಅರ್ಜುನಾಪುರ, ಶಿತ... ಮೂಡಬಿದಿರೆ

**ತಲಾ ರೂಪಾಯಿ 2,500/–ರಂತೆ ಅರ್ಚಕರಿಗೆ**

1) **ಶ್ರೀ ನಾರಾಯಣ ಭಟ್**
ಶ್ರೀ ಭದ್ರಕಾಳಿ ದೇವಸ್ಥಾನ, ಕಿಲ್ಲೂರು, ಬಂಗಾಡಿ
2) **ಶ್ರೀ ಎನ್. ನಾರಾಯಣ ರಾವ್**
ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬೆಳ್ತಂಗಡಿ
3) **ಶ್ರೀ ಕೆ. ಸುಬ್ರಹ್ಮಣ್ಯ ರಾವ್**
ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಶಾಲಿಪುರ, ಕೊಕ್ರಾಡಿ
4) **ಶ್ರೀ ಶ್ರೀಧರ ಭಟ್**
ಶ್ರೀ ಸದಾಶಿವ ದೇವಸ್ಥಾನ, ಕೂಡುಬೆಟ್ಟು, ಕಿಲ್ಲೂರು, ಬೆಳ್ತಂಗಡಿ

**ತಲಾ ರೂಪಾಯಿ 5,000/–ದಂತೆ**

1) ಶ್ರೀ ಕೆ. ಭವಾನಿಶಂಕರ ರಾವ್, ಕಟೀಲು
2) ಶ್ರೀ ಬಾಲಚಂದ್ರ ರಾವ್, ಮಾರ್ಪಳ್ಳಿ, ಉಡ...
3) ಶ್ರೀ ಜಗಜೀವನ ರಾವ್, ರೆಂಜಾಳ, ಸುಳ್ಯ
4) ಶ್ರೀ ಮಹೇಶ ರಾವ್, ಬೆಂಗಳೂರು
5) ಶ್ರೀಮತಿ ಎನ್. ಎಸ್. ವಿಶಾಲಾಕ್ಷೀ, ಪುತ್ತೂ...
6) ಶ್ರೀ ಹರಿಕೃಷ್ಣ ರಾವ್, ಕಟೀಲು

**ಮಹಾಮಂಡಲದ ವತಿಯಿಂದ ಜರಗಿದ 15 ದಿ... ಸಂಧ್ಯಾವಂದನಾ ತರಬೇತಿ ಶಿಬಿರದ ಗುರುಗ... ಶ್ರೀ ಹೆಜಮಾಡಿ ಕೃಷ್ಣರಾಜ ಭಟ್ ಅವರಿಗೆ ನೀಡಿರುವ ಗ... ಸಂಭಾವನೆ ರೂಪಾಯಿ 10,000/–**

- *ಹೀಗೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವತಿಯಿಂದ ಒಟ್ಟು ರೂಪಾಯಿ 1,20,000/– (ಒಂದು ಲಕ್ಷದ ಇಪ್ಪತ್ತು ಸಾವಿರ) ಗೌರವಪೂರ್ವಕವಾಗಿ ನೀಡಿರುತ್ತೇವೆ ಹಾಗೂ ಸಮ... ಹಿತಾಸಕ್ತಿಗಾಗಿ ಶ್ರಮಿಸುವ ಅನೇಕ ಕಾರ್ಯಯೋಜನೆಗಳಿಗೆ ಮಹಾಮಂಡಲದ ಜೊತೆ ಬಾಂಧವರು ಕೈಜೋಡಿಸಿ ಸಹಕರಿಸಬೇಕಾಗಿ ಈ ಮೂಲಕ ವಿನಂತಿ.*
- *ಮುಂದೆಯೂ ನಮ್ಮ ಸ್ಥಾನಿಕ ಸಮಾಜದ ಬಾಂಧವರಿಗೆ ಅನಿವಾರ್ಯ ಸಂದರ್ಭವೊದಗಿಬಂದಲ್ಲಿ ನಮ್ಮ ಗಮನಕ್ಕೆ ತಂದರೆ ಮಹಾಮಂಡಲದ ವತಿಯಿಂದ ತಕ್ಷಣ ಸ್ಪಂದಿಸಲಾಗು... ಎಂಬುದನ್ನು ಗೌರವಪೂರ್ವಕವಾಗಿ ತಿಳಿಯಪಡಿಸುತ್ತೇವೆ.*

**ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯ ಸಂಘಗಳು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು**

**ಸಂಪರ್ಕ : ಎಂ. ದೇವಾನಂದ ಭಟ್ ಬೆಳುವಾಯಿ, ದ. ಕ. ಪ್ರಧಾನ ಕಾರ್ಯದರ್ಶಿ – ಮೊಬೈಲ್ : 9845644556 / 9901995655**

## ಶ್ರೀ ಕ್ಷೇತ್ರ ಉದಯಾದ್ರಿ
## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ

ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ - 574 111

ಪ್ರಿಯರೇ,

ಸ್ವಸ್ತಿ! ಶ್ರೀ ಶಾರ್ವರಿ ನಾಮ ಸಂವತ್ಸರದ ತುಲಾ ಮಾಸ ಅಶ್ವೀಜ ಶುದ್ಧ ಪಾಡ್ಯದಿಂದ ನವಮಿಪರ್ಯಂತ

ಶ್ರೀ ಪ್ರಸನ್ನ ಪಾರ್ವತೀ ದೇವಿಯ ಸನ್ನಿಧಾನದಲ್ಲಿ

**ನವರಾತ್ರಿ ಮಹೋತ್ಸವ ಅಂಗವಾಗಿ**



ತಾ. 17-10-2020ನೇ ಶನಿವಾರದಿಂದ
ತಾ. 25-10-2020ನೇ ರವಿವಾರದ ವರೆಗೆ
ಪ್ರತಿದಿನ ರಾತ್ರಿ ಗಂಟೆ 7-30ಕ್ಕೆ

**ವಿಶೇಷ ದುರ್ಗಾ ಪೂಜಾ ಕಾರ್ಯಕ್ರಮವು**

ಜರಗಲಿರುವುದು.

ಸ್ವಸ್ತಿ! ಶ್ರೀ ಶಾರ್ವರಿ ನಾಮ ಸಂವತ್ಸರದ ತುಲಾ ಮಾಸ ಅಶ್ವೀಜ ಶುದ್ಧ ಅಷ್ಟಮಿಯ ದಿನಾಂಕ 24-10-2020ನೇ ಶನಿವಾರ

ದುರ್ಗಾಷ್ಟಮಿಯಂದು ಶ್ರೀ ಕ್ಷೇತ್ರದಲ್ಲಿ



**'ಶ್ರೀ ಚಂಡಿಕಾ ಹೋಮ'ವು**



ಸಂಪನ್ನಗೊಳ್ಳಲಿರುವುದು.

ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾಕಾರ್ಯಗಳಲ್ಲಿ ತಾವೆಲ್ಲರೂ ಭಾಗವಹಿಸಿ, ಸಿರಿಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ, ಶ್ರೀ ದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ –

ಜಗದಾಭಿರಾಮ ಸ್ವಾಮಿ – ಪ್ರಧಾನ ಅರ್ಚಕರು
ಪಿ. ರಘುವೀರ್ ರಾವ್ – ಅಧ್ಯಕ್ಷರು
ಕರುಣ್ ರಾವ್ ಬೆಳ್ಳೆ – ಗೌರವಾಧ್ಯಕ್ಷರು
ಶ್ರೀನಿವಾಸ ಶರ್ಮ, ಪಾದೆಬೆಟ್ಟು – ಕಾರ್ಯದರ್ಶಿ
ಪಿ. ಡಿ. ಶೇಖರ ರಾವ್ – ಖಜಾಂಚಿ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ಟೆಂಪಲ್ ಟ್ರಸ್ಟ್ (ರಿ.)
ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು

## ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ

ಅಂಚೆ : ಕೋಡಿಂಬಾಡಿ - 574 325, ಪುತ್ತೂರು ತಾಲೂಕು, ದ. ಕ.
ಮೊಬೈಲ್ : 9901247080

ಪ್ರಿಯ ಭಗವದ್ಭಕ್ತರೇ,

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

ಸ್ವಸ್ತಿ! ಶ್ರೀ ಶಾರ್ವರಿ ಸಂವತ್ಸರದ ಅಶ್ವೀಜ ಶುಕ್ಲ ಪಾಡ್ಯದಿಂದ ದಶಮಿಪರ್ಯಂತ
(ದಿನಾಂಕ 17-10-2020ರಿಂದ 25-10-2020)

ಶ್ರೀ ದೇವಳದಲ್ಲಿ

**'ಶರನ್ನವರಾತ್ರಿ ಉತ್ಸವ ಹಾಗೂ ಶ್ರೀ ಚಂಡಿಕಾ ಹೋಮ'**

ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು.

ಭಕ್ತಾದಿಗಳಾದ ತಾವೆಲ್ಲರೂ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ತೀರ್ಥಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ –

ಯಂ. ನಾಗೇಶ ಶರ್ಮ – ಅರ್ಚಕರು – ಮೊಬೈಲ್ : 9901247080
ಟಿ. ಅಣ್ಣಪ್ಪಯ್ಯ ತೆಂಕಿಲ – ಅಧ್ಯಕ್ಷರು – ✆ : 08251 - 232491

ಮತ್ತು ಆಡಳಿತ ಮಂಡಳಿ ಸರ್ವಸದಸ್ಯರು

ವಿ. ಸೂ. : ತಾ. 18-10-2020ರಂದು ಸಾಮೂಹಿಕ ಚಂಡಿಕಾ ಹೋಮ
ತಾ. 21-10-2020ರಂದು ಶ್ರೀ ಚಂಡಿಕಾ ಹೋಮ

**ಸೇವೆ :**

ಶ್ರೀಮತಿ ಮತ್ತು ಶ್ರೀ ಎಂ. ನಾಗೇಶ ಶರ್ಮ ಮತ್ತು ಮಕ್ಕಳು, ಮಠದಬೆಟ್ಟು

**ವಿಶೇಷ ಸೇವೆ :**

| | | | |
|---|---|---|---|
| ನವರಾತ್ರಿ ಪೂಜೆ | ₹ 500/- | ರಂಗಪೂಜೆ | ₹ 1,000/- |
| ಅನ್ನದಾನ | ₹ 1,000/- | ಶ್ರೀ ಚಂಡಿಕಾ ಹೋಮ (ಸಾಮೂಹಿಕ) | ₹ 1,000/- |

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಹಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.




### ಶ್ರೀ ಪಿ. ಪ್ರದೀಪ ಕುಮಾರ್‌ರವರಿಗೆ
## ಅಭಿನಂದನೆಗಳು

ನನ್ನ ಚಿಕ್ಕಪ್ಪರಾದ ದಿ| ಪಂಜ ಭಾಸ್ಕರ ರಾಯರ ಪುತ್ರ **ಶ್ರೀ ಪಿ. ಪ್ರದೀಪ ಕುಮಾರ್**‌ರವರನ್ನು ಸರಕಾರವು ಪ್ರತಿಷ್ಠಿತ ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಆಡಳಿತ ಮಂಡಳಿಯ ನಿರ್ದೇಶಕರನ್ನಾಗಿ ಚುನಾಯಿಸಿ ಗೌರವಿಸಿದ್ದನ್ನು ತಿಳಿದು ನನಗೆ ತುಂಬಾ ಸಂತೋಷವಾಯಿತು. ಅವರು ಈ ಹಿಂದೆ ಎಸ್.ಬಿ.ಐ.ಯಲ್ಲಿ ಸೇವೆಯಲ್ಲಿದ್ದು ನಿವೃತ್ತರಾಗಿದ್ದರು.

ಅವರ ಉದ್ಯೋಗ ಸೇವಾ ಜೀವನ ಇನ್ನಷ್ಟು ಬೆಳಗಲಿ ಎಂದು ಹಾರೈಸುತ್ತಿದ್ದೇನೆ.



**ಪಿ. ಮೋಹನದಾಸ್ ರಾವ್**
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು



## ಸನ್ಮಾನ

ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ 70ನೇ ಜನ್ಮ ದಿನಾಚರಣೆ ಪ್ರಯುಕ್ತ ಪುತ್ತೂರು ಕಬಕದ ಹತ್ತಿರದ ಕೆದಿಲ ಗ್ರಾಮದ 10 ಜನ ಮಾದರಿ ಕೃಷಿಕರನ್ನು ಸನ್ಮಾನಿಸುವ ಕಾರ್ಯಕ್ರಮ ದಿನಾಂಕ 14-9-2020ನೇ ಸೋಮವಾರ 'ಮಹಾದೇವಿ ಸಭಾಂಗಣ', ಕಬಕದಲ್ಲಿ ನಡೆಯಿತು.

ಈ ಕಾರ್ಯಕ್ರಮದಲ್ಲಿ ಪುತ್ತೂರಿನ ಶಾಸಕರಾದ ಶ್ರೀ ಸಂಜೀವ ಮಠಂದೂರುರವರು ನಮ್ಮ ಸಮಾಜದ ಮಾದರಿ ಕೃಷಿಕ ಶ್ರೀ ನಾರಾಯಣ ಉಬರಳೆಯವರನ್ನು ಸನ್ಮಾನಿಸಿದರು.

ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325

**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**



## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀಮತಿ ಭುವನೇಶ್ವರಿ ಮತ್ತು ಶ್ರೀ ಐ. ಪಿ. ನಾಗರಾಜ್, ಕುಲಶೇಖರ, ಮಂಗಳೂರು ಇವರ ಸುಪುತ್ರಿ **ಚಿ। ಸೌ। ಸುಷ್ಮಾ ಎನ್.** ಹಾಗೂ ಶ್ರೀಮತಿ ಕಮಲ ಮತ್ತು ಶ್ರೀ ಲಕ್ಷ್ಮೀನಾರಾಯಣ ಬೈಪಡಿತ್ತಾಯ, ನರಿಮೊಗರು ಇವರ ಸುಪುತ್ರ **ಚಿ। ಸಂದೇಶ ಬಿ.** ಇವರ ವಿವಾಹವು ತಾ. 31–08–2020ನೇ ಸೋಮವಾರ ಮಂಗಳೂರಿನ ಶಕ್ತಿನಗರದ ಶ್ರೀ ಗೋಪಾಲಕೃಷ್ಣ ದೇವಸ್ಥಾನದ 'ಸುಮನಸ ಸಭಾಭವನ'ದಲ್ಲಿ ನೆರವೇರಿತು.

***

ಶ್ರೀಮತಿ ನಳಿನಿ ಮತ್ತು ಚಿತ್ರಾಪುರ ಶ್ರೀ ಆನಂದ ರಾವ್ ಇವರ ಸುಪುತ್ರಿ **ಚಿ। ಸೌ। ಚಂದ್ರಿಕಾ**ರವರ ವಿವಾಹ ಸಮಾರಂಭವು ಶ್ರೀಮತಿ ಪ್ರೇಮ ಮತ್ತು ಶ್ರೀ ಸಿ. ಹರೀಶ ಇವರ ಸುಪುತ್ರ **ಚಿ। ರಾಕೇಶ್**ರವರೊಂದಿಗೆ ತಾ. 24–08–2020ನೇ ಸೋಮವಾರ 'ಚಿತ್ರಾಪುರ ಮಠದ ಸಭಾಭವನ'ದಲ್ಲಿ ನೆರವೇರಿತು.

## ಭಾವಪೂರ್ಣ ಶ್ರದ್ಧಾಂಜಲಿ



ಎ. ಪಿ. ಎನ್. ಶರ್ಮ

**ನಮ್ಮನ್ನು ಅಗಲಿದ ಛಲ ಬಿಡದ ಸಾಧಕ**

**ಎ. ಪಿ. ನಾರಾಯಣ ಶರ್ಮ**

(ಶ್ರೀ ಸತ್ಯಸಾಯಿಬಾಬರ ಭಕ್ತ) ವಯೋವೃದ್ಧರಿ ದೀನದಲಿತರಿಗೆ, ಅಂಧ ಮಕ್ಕಳಿಗೆ, ಪಶುಪಕ್ಷಿಗಳಿ ಆಶ್ರಯ ನೀಡಿ ಸಾಕಿ ಸಲಹಿ ಅವರೆಲ್ಲರ ಬಾಳಿನ ಬೆಳಕಾಗಿ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ದೇವರಪಾದ ಸೇರಿದ ದೀನಬಂಧು ನಿನ್ನ ದಿವ್ಯಾತ್ಮ ಶಾಂತಿಯನ್ನಿತ್ತು ಶ್ರೀ ದೇವರು ಸದ್ಗತಿಯನ್ನು ನೀಡಲಿ ಎಂದು ಬೇಡುವ –

**ನಿನ್ನಣ್ಣ ಶ್ರೀ ಎ. ಪಿ. ಉಮಾಕಾಂತ ಶರ್ಮ, ವ್ಯಾಸನಗರ, ಮಂಗಳೂರು**
**ಸಹೋದರರು, ಸಹೋದರಿಯರು ಮತ್ತು ಬಂಧು–ಬಳಗದವರು**

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಬೆಂಗಳೂರಿನ ನಿವಾಸಿ **ಶ್ರೀ ಎ. ಪಿ. ನಾರಾಯಣ ಶರ್ಮ** (64) ತಾ. 14–09–2020ನೇ ಸೋಮವಾರ ತನ್ನ ನಿವಾಸದಲ್ಲಿ ನಿಧನ ಹೊಂದಿದರು.

ಕೀರ್ತಿಶೇಷ ಪದ್ಮನಾಭ ಶರ್ಮ ಹಾಗೂ ಶ್ರೀಮತಿ ಸೀತಮ್ಮ ಇವರ ಪುತ್ರರಾಗಿ ಕಾರ್ಕಳದಲ್ಲಿ ಜನಿಸಿದ ಶ್ರೀ ಎ. ಪದ್ಮನಾಭ ನಾರಾಯಣ ಶರ್ಮ ಇವರು ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಅನಂತರ ಬಿ.ಕಾಂ. Diploma in Electrical Engg., Diploma in Plastic Engg. ಮುಂತಾದ ಪದವಿಯನ್ನು ಪಡೆದುಕೊಂಡರು.

14ನೇ ವಯಸ್ಸಿಗೆ ಮುಂಬಯಿಗೆ ತೆರಳಿದ ಇವರು ವಿದ್ಯಾಭ್ಯಾಸದ ಜೊತೆ ಜೊತೆಯಲ್ಲಿ ಅರೆಕಾಲಿಕ (Part Time) ಉದ್ಯೋಗ ಮಾಡಿ, ಕ್ರಮೇಣ ಸ್ವತಃ ಕಿರುಉದ್ಯಮವನ್ನು ಸ್ಥಾಪಿಸಿದರು. ಅಲ್ಲಿಯೇ ಕು। ಶೋಭಾ ಶರ್ಮರ ಕೈಹಿಡಿದು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಓರ್ವ ಪುತ್ರಿ ಶೀತಲ್ ಬೆಂಗಳೂರಿನಲ್ಲಿ ನೆಲೆಸಿದ್ದಾಳೆ.

ಸತ್ಯಸಾಯಿಬಾಬರ ಭಕ್ತರಾದ ಇವರು ಅನಂತರದ ದಿನಗಳಲ್ಲಿ ಮುಂಬಯಿಯನ್ನು ಬಿಟ್ಟು ಬೆಂಗಳೂರಿಗೆ ಬಂದು ಸ್ವಂತ ಖರ್ಚಿನಿಂದ ಅಂಧ ಹಾಗೂ ಅನಾಥ ಮಕ್ಕಳಿಗಾಗಿ 'ಸಾಯಿ ಆಶ್ರಯಧಾಮ ಸಾಯಿ ಆರೋಗ್ಯಧಾಮ'ವನ್ನು ಸ್ಥಾಪಿಸಿ ಕಳೆದ 20 ವರ್ಷಗಳಲ್ಲಿ ಸುಮಾರು 200ಕ್ಕೂ ಹೆಚ್ಚು ಮಕ್ಕಳು ವಿದ್ಯಾವಂತರಾಗಿ, ಸ್ವಾವಲಂಬಿಗಳಾಗಿ ಬದುಕುವಂತೆ ಮಾಡಿದ್ದಾರೆ. ಯಾರಲ್ಲಿಯೂ ಸಹಾಯಧನ ಪಡೆಯದ ಈ ದಂಪತಿಗಳಿಗೆ ಪ್ರಾಣಿಗಳ ಮೇಲಿನ ದಯೆ ಎಷ್ಟಿತ್ತೆಂದರೆ ಪ್ರಾಣಿಗಳ ಅಂತಿಮ ತಾಣವೋ ಎನ್ನುವಂತೆ 'ಸಾಯಿಗೋಕುಲ ಧಾಮ'ವನ್ನು ಸ್ಥಾಪಿಸಿದ್ದಾರೆ. ಪ್ರಸ್ತುತ 70ಕ್ಕೂ ಹೆಚ್ಚು ಪ್ರಾಣಿಗಳು ಇಲ್ಲಿವೆ.



ಕೀರ್ತಿಶೇಷ ದೇವದಾಸ ರಾವ್‌ರವರ ಪತ್ನಿ **ಶ್ರೀಮತಿ ಮೀನಾಕ್ಷಮ್ಮ**ರವರು ಕಳಸದಲ್ಲಿರುವ ಸ್ವಗೃಹದಲ್ಲಿ ದಿನಾಂಕ 08–09–2020ರ ಮಂಗಳವಾರ ಸಂಜೆ ಗಂಟೆ 06–45ಕ್ಕೆ ಶಿವೈಕ್ಯ ರಾಗಿರುತ್ತಾರೆ. ಇವರು 6 ಜನ ಹೆಣ್ಣುಮಕ್ಕಳು ಮತ್ತು ಏಕೈಕ ಪುತ್ರ ಹಾಗೂ ಅಪಾರ ಬಂಧು ವರ್ಗದವರನ್ನು ಅಗಲಿರುತ್ತಾರೆ.



ಓರಿಯಂಟಲ್ ಇನ್ಶೂರೆನ್ಸ್ ಕಂಪೆನಿಯ ಜನಪ್ರಿಯ ಅಭಿವೃದ್ಧಿ ಅಧಿಕಾರಿಯಾಗಿ ನಿವೃತ್ತಿ ಹೊಂದಿರುವ ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ ಜನಸ್ನೇಹಿ ಸಮಾಜಸೇವಕರಾದ **ಕಬ್ಬಿನಾಲೆ ಮೋಹನ್ ಹೆಬ್ಬಾರ್** (68) ತಾ. 26–09–2020ರ ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿರುತ್ತಾರೆ.



ಕಡಬದಲ್ಲಿ ನೆಲೆಸಿರುವ **ಮಡಿಯಾಳ ಸದಾನಂದ ರಾವ್** (76) ತಾ. 10–09–2020ನೇ ಗುರುವಾರ ನಿಧನ ಹೊಂದಿದರು. ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ. ಇವರು ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ (ನಿ.)ದ ಸಲಹಾ ಸಮಿತಿಯ ಸದಸ್ಯರಾಗಿ ಹತ್ತು ವರ್ಷಕ್ಕಿಂತಲೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು.



**ಬೊಕ್ಕಸ ಭಾಸ್ಕರ ರಾವ್** (64) ತಾ. 22–09–202 ಮಂಗಳವಾರ ಮೂಡಬಿದಿರೆಯಲ್ಲಿ ನಿಧನ ಹೊಂದಿದರು. ಇ ಪತ್ನಿ, ಪುತ್ರ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂ ಬಾಂಧವರನ್ನು ಅಗಲಿದ್ದಾರೆ.



ಪಡುಬಿದ್ರೆಯ **ಶ್ರೀಮತಿ ಪ್ರಸನ್ನ** (61) ಇವರು ತಾರೀಕು 25–09–2020ನೇ ಶುಕ್ರವಾರ ನಿಧನ ಹೊಂದಿದರು. ಇವರು ಪತಿ ಶ್ರೀ ಮೋಹನ್ ರಾವ್, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



**ಕೊಡವೂರು ವೆಂಕಟರಾಯರು** (86) ತಾರಿ 29–09–2020ನೇ ಮಂಗಳವಾರ ಹೃದಯಾಘಾತದಿ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರು ಅಖಿಲ ಭಾ ಸ್ಥಾನಿಕ ಸಭಾದ ಮಾಜಿ ಅಧ್ಯಕ್ಷರಾಗಿರುತ್ತಾರೆ.



ಕೀರ್ತಿಶೇಷ ಯು. ರಾಮಕೃಷ್ಣಯ್ಯ ಇವರ ಪತ್ನಿ **ಶ್ರೀಮತಿ ಇಂದಿರಮ್ಮ** (76) ತಾ. 02–10–2020ರಂದು ನಿಧನ ಹೊಂದಿದರು. ಇವರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಕೀರ್ತಿಶೇಷ ಪುಂಚ ರಾಧಾಕೃಷ್ಣ ರಾವ್‌ರವರ ಪತ್ನಿ **ಶ್ರೀಮತಿ ಪ್ರ** ತಾ. 2–10–2020ನೇ ಶುಕ್ರವಾರ ಹೃದಯಾಘಾತದಿಂದ ಮಂಗಳೂರಿ ನಿಧನ ಹೊಂದಿರುವರು. ಇವರು ಇಬ್ಬರು ಹೆಣ್ಣುಮಕ್ಕಳು, ಮೊಮ್ಮಕ್ಕಳು ಹಾ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
**ಹಾಗೂ**
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
**ಮಂಗಳೂರು - 575 002** ✆ : **9880258216**

# ಶ್ರೀ ಶಂಕರ ಪ್ರತಿಷ್ಠಾನ (ರಿ.), ಪ್ರಸಾದ ಭವನ, ತೆಳ್ಳಾರ್‌ರಸ್ತೆ, ಕಾರ್ಕಳ ಇದರ ವಾರ್ಷಿಕ ಮಹಾಸಭೆ

ದಿನಾಂಕ 12–9–2020ನೇ ಶನಿವಾರ ಅಪರಾಹ್ನ 3–00 ಗಂಟೆಗೆ ಸರಿಯಾಗಿ ನಮ್ಮ ಸಂಘದ ವಾರ್ಷಿಕ ಮಹಾಸಭೆಯು (2019–'20) ನಮ್ಮ ಬಾಂಧವರ ಕೂಡುವಿಕೆಯಿಂದ ಹಾಗೂ ಸಮಾಜದ, ತಾಲೂಕಿನ ಹಿರಿಯರಾದ ಶ್ರೀ ಐ. ಕೆ. ಕೃತಿವಾಸ ಶರ್ಮ, ಶ್ರೀ ರತ್ನಾಕರ ರಾವ್ ಪರಪು ಹಾಗೂ ಶ್ರೀ ರಾಮಮೋಹನ ರಾವ್ ಮುನಿಯಾಲು ಹಾಗೂ ಶ್ರೀಮತಿ ಸಾವಿತ್ರಿ ಮನೋಹರ್ ಹಾಗೂ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೇಶವ ರಾವ್ ಕುಕ್ಕುಂದೂರು ಇವರುಗಳು ದೀಪ ಬೆಳಗಿಸುವ ಮೂಲಕ ಸಂಘದ ಸಭಾಂಗಣ 'ಪ್ರಸಾದ ಭವನ'ದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೇಶವ ರಾವ್‌ರವರು ವಹಿಸಿದ್ದರು. ಶ್ರೀಮತಿ ಸೌಮ್ಯ ರಾವ್, ಶ್ರೀಮತಿ ಮಲ್ಲಿಕಾ ಹಾಗೂ ಶ್ರೀಮತಿ ಐ. ಕೆ. ಪ್ರಭಾವತಿಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಬಳಿಕ ಸಮಾಜದ ಅಗಲಿದ ಹಿರಿಯ ಚೇತನಗಳಿಗೆ ಒಂದು ನಿಮಿಷದ ಮೌನಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ತದನಂತರ ಕಾರ್ಯದರ್ಶಿ ಶ್ರೀ ಕೆ. ಹರಿಶ್ಚಂದ್ರ ರಾವ್‌ರವರು ವರ್ಷದ ವರದಿಯನ್ನು ವಾಚಿಸಿದರು ಹಾಗೂ ಖಜಾಂಚಿ ಶ್ರೀ ಕೋದಂಡರಾಮರವರು ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿದರು. ಬಳಿಕ ವರದಿ ಹಾಗೂ ಲೆಕ್ಕಪತ್ರವು ಸೇರಿದ ಸಮಾಜಬಾಂಧವರ ಸಮ್ಮುಖದಲ್ಲಿ ಅಧ್ಯಕ್ಷರ ಕೋರಿಕೆಯಂತೆ ಅಂಗೀಕರಿಸಲ್ಪಟ್ಟಿತು.

ಕಾರ್ಯಕ್ರಮದಂತೆ ಮುಂದೆ ಕಾರ್ಕಳ ತಾಲೂಕಿನಲ್ಲಿಯ ನಮ್ಮ ಸಮಾಜದ ದ್ವಿತೀಯ P.U.C.ಯ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಚಿ| ಪ್ರದೀಪ್ ರಾವ್ ಹೊಸ್ಮಾರು, ಕುಮಾರಿ ಪ್ರಜ್ಞಶ್ರೀ ಹೆಬ್ಬಾರ್ ಬೈಲೂರು, ಚಿ| ಸುಜನ್ ರಾವ್ ಕಾರ್ಕಳ ಹಾಗೂ ಕುಮಾರಿ ಅನನ್ಯ ಹೆಬ್ಬಾರ್ ಕಬ್ಬಿನಾಲೆ ಮತ್ತು S.S.L.C.ಯ ಚಿ| ಕಾರ್ತಿಕ್ ಹೆಬ್ಬಾರ್ ಕಾರ್ಕಳ ಹಾಗೂ ಚಿ| ಶ್ರೀವತ್ಸ ರಾವ್ ಬಜೆಗೋಳಿ ಇವರುಗಳನ್ನು ಸಂಘದ ವಿದ್ಯಾನಿಧಿಯ ವತಿಯಿಂದ ವಿದ್ಯಾರ್ಥಿವೇತನವನ್ನು ನೀಡುವುದರೊಂದಿಗೆ ಸನ್ಮಾನಿಸಲಾಯಿತು. ಇದಲ್ಲದೆ P.U.C.ಯಲ್ಲಿ ಪ್ರಥಮ ಬಂದವರಿಗೆ ವಿದ್ಯಾಭಿಮಾನಿಗಳಾದ ದಿ| ದೇವರಾವ್ ನಕ್ರೆ ಹಾಗೂ ದಿ| ಶಿವರಾವ್ ನಕ್ರೆ ಇವರ ಸ್ಮರಣಾರ್ಥವಾಗಿ ಮಗಳಾದ ಶ್ರೀಮತಿ ಅನುರಾಧಾ ರಾವ್ ನಕ್ರೆ ಮತ್ತು P.U.C. ಕೆಮೆಸ್ಟ್ರಿಯಲ್ಲಿ ಪ್ರಥಮ ಬಂದವರಿಗೆ ದಿ| ಪ್ರೊ| ಸೂರ್ಯನಾರಾಯಣ ರಾವ್‌ರವರ ಸ್ಮರಣಾರ್ಥ ಪತ್ನಿ ಶ್ರೀಮತಿ ಇಂದಿರಾ ರಾವ್ ಹಾಗೂ ಮಗ ಡಾಕ್ಟರ್ ಶರತ್ ಕುಮಾರ್ ಮಣಿಪಾಲ (K.M.C. ಮಣಿಪಾಲ ಆಸ್ಪತ್ರೆಯ ಡೀನ್) ಹಾಗೂ S.S.L.C.ಯ ಗಣಿತ ವಿಷಯದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ದಿ| ಪುಂಡಲೀಕ ವರದಾ ರಾವ್ ಇವರ ಸ್ಮರಣಾರ್ಥ ಶ್ರೀಮತಿ ಉಷಾ ರಾಜಶೇಖರ ರಾವ್ ಹಿರ್ಗಾನ ಇವರುಗಳು ಪ್ರತೀ ವರ್ಷದಂತೆ ಈ ವರ್ಷವೂ ಕೂಡ ವಿದ್ಯಾರ್ಥಿ ಪುರಸ್ಕಾರವನ್ನು ನಗದು ರೂಪದಲ್ಲಿ ನೀಡಿ ಪ್ರೋತ್ಸಾಹಿಸಿದರು. ವಿದ್ಯಾರ್ಥಿಗಳ ಹೆಸರಿನ ಪಟ್ಟಿಯನ್ನು ಕೆಮ್ಮಣ್ಣು ಶ್ರೀ ಅನಿಲ್ ರಾವ್‌ರವರು ವಾಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರಾದ ಕರ್ವಾಲು ಶ್ರೀ ಸತೀಶ್ ರಾವ್‌ರವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಶ್ರೀಯುತರ ಸನ್ಮಾನಪತ್ರವನ್ನು ಶ್ರೀಮತಿ ಶ್ರೀಲತಾ ಕೆಮ್ಮಣ್ಣುರವರು ವಾಚಿಸಿದರು. ತದನಂತರ ಸನ್ಮಾನ ಸ್ವೀಕರಿಸಿದ ಇಬ್ಬರು ವಿದ್ಯಾರ್ಥಿಗಳು ಹಾಗೂ ಶ್ರೀಯುತ ಸತೀಶ್ ರಾವ್‌ರವರು ತಮ್ಮ ಅನಿಸಿಕೆಗಳನ್ನು ಸೇರಿದ ಸಮಾಜ ಬಾಂಧವರೊಂದಿಗೆ ಹಂಚಿಕೊಂಡರು.

ಇದಾದ ಬಳಿಕ ಕಳೆದ ವರ್ಷದಲ್ಲಿ ಸಂಘದ ವಾರ್ಷಿಕೋತ್ಸವಕ್ಕೆ ಸಹಕಾರ ನೀಡಿದವರ ಹಾಗೂ ಹೊಸತಾಗಿ ಸಂಘಕ್ಕೆ ನೋಂದಾವಣೆ ಮಾಡಿದವರ ಹೆಸರನ್ನು ಶ್ರೀಮತಿ ಮಲ್ಲಿಕಾ ಹೆಬ್ಬಾರ್‌ರವರು ಸಭೆಯ ಮುಂದೆ ವಾಚಿಸಿದರು. ಈ ನಡುವೆ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಕಾರ್ಕಳ ಶಾಖೆಯ ಪ್ರಬಂಧಕರು ಬ್ಯಾಂಕಿನಲ್ಲಿರುವ ಸವಲತ್ತುಗಳ ಬಗ್ಗೆ ವಿವರಣೆ ನೀಡಿ ಸಮಾಜ ಬಾಂಧವರು ಇದರ ಸದುಪಯೋಗವನ್ನು ಪಡೆದುಕೊಂಡು, ಸಹಕಾರ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಸಹಕಾರ ಸಂಘದ ಪರವಾಗಿ ವಿನಂತಿ ಮಾಡಿಕೊಂಡು ಕಾರ್ಕಳದಿಂದ ನಿರ್ದೇಶಕರಾಗಿ ಆಯ್ಕೆಯಾದಂತಹ ಶ್ರೀಯುತ ರತ್ನಾಕರ ರಾವ್ ಕೊಕ್ರಾಡಿ ಮತ್ತು ಶ್ರೀಯುತ ಕರ್ವಾಲು ಹರಿಶ್ಚಂದ್ರ ರಾವ್‌ರವರ ಹೆಸರನ್ನು ಹೇಳುತ್ತಾ ಹಾಗೂ ಕಾರ್ಕಳದ ಸಹಕಾರ ಸಂಘದ ಸಲಹಾ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀಯುತ ಕೇಶವ ರಾವ್ ಕುಕ್ಕುಂದೂರುರವರನ್ನು ಅಭಿನಂದಿಸಿದರು. ವಾರ್ಷಿಕ ಮಹಾಸಭೆಗೆ ಆಗಮಿಸಿದ ಎಲ್ಲರಿಗೂ ಉಪಾಹಾರದ ವ್ಯವಸ್ಥೆಯನ್ನು ಮಾಡಿದ ಪ್ರಾಯೋಜಕರಾದ ಶ್ರೀಮತಿ ಮತ್ತು ಶ್ರೀ ಭವಾನಿಶಂಕರ ರಾವ್ ಪ್ರಸಾದಭವನ, ಶ್ರೀಮತಿ ಮತ್ತು ಶ್ರೀ ವಿಜಯ ರಾವ್ ಪರಪು ಹಾಗೂ ಶ್ರೀಮತಿ ಮತ್ತು ಶ್ರೀ ರತ್ನಾಕರ ರಾವ್ ಕೊಕ್ರಾಡಿ ಇವರಿಗೆ ಅಧ್ಯಕ್ಷರು ಹೂವನ್ನು ನೀಡುವುದರೊಂದಿಗೆ ಗೌರವಿಸಿದರು. ಹಾಗೆಯೇ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸನ್ಮಾನಕ್ಕೆ ಸಹಕರಿಸಿದಂತಹ ಶ್ರೀಮತಿ ಸಾವಿತ್ರಿ ಮನೋಹರ ರಾವ್, ಶ್ರೀ ರತ್ನಾಕರ ರಾವ್ ಹಾಗೂ ಶ್ರೀ ಕೆ. ಹರಿಶ್ಚಂದ್ರ ರಾವ್ ಇವರಿಗೆ ಅಭಿನಂದನೆ ಸಲ್ಲಿಸಲಾಯಿತು. ವೇದಿಕೆಯಲ್ಲಿ ಅಧ್ಯಕ್ಷರಾದ ಶ್ರೀ ಕೇಶವ ರಾವ್, ಕಾರ್ಯದರ್ಶಿ ಶ್ರೀ ಕೆ. ಹರಿಶ್ಚಂದ್ರ ರಾವ್, ಕೋಶಾಧಿಕಾರಿ ಶ್ರೀ ಕೋದಂಡರಾಮ ರಾವ್, ಸಮಾಜದ ಹಿರಿಯರಾದ ಶ್ರೀ ರಾಮಮೋಹನ ರಾವ್ ಮುನಿಯಾಲು, ಶ್ರೀ ರಮೇಶ್ ರಾವ್ (C.A.), ಶ್ರೀಮತಿ ಶೈಲಾ ರಮೇಶ್ ರಾವ್ ಹಾಗೂ ಶ್ರೀಮತಿ ಐ. ಕೆ. ಪ್ರಭಾವತಿ ಶರ್ಮ ಉಪಸ್ಥಿತರಿದ್ದರು. ಹಾಗೆಯೇ ಸಂಘದ ಪದಾಧಿಕಾರಿಗಳೆಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಸಾವಿತ್ರಿ ಮಹೋಹರ ರಾವ್ ಮತ್ತು ಶ್ರೀಮತಿ ಐ. ಕೆ. ರಾಜೇಶ್ವರಿ ಶರ್ಮ ಹಾಗೂ ಶ್ರೀ ಶ್ರೀಕಾಂತ್ ರಾವ್ ಕೆ. ಪಿ. ಇವರು ವೇದಿಕೆಯಲ್ಲಿ ಸಹಕರಿಸಿದರು. ಆಗಮಿಸಿದ ಎಲ್ಲರನ್ನೂ ಶ್ರೀಮತಿ ಶೈಲಾ ರಮೇಶ್ ರಾವ್‌ರವರು ಸ್ವಾಗತಿಸಿ, ಶ್ರೀಯುತ ಸುಬ್ರಹ್ಮಣ್ಯ ಶರ್ಮರವರು ಧನ್ಯವಾದ ನೀಡುವುದರೊಂದಿಗೆ, ಶ್ರೀಮತಿ ಸೌಮ್ಯ ಭವಾನಿಶಂಕರ ರಾವ್‌ರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

**ವರದಿ : ಕರ್ವಾಲು ಹರಿಶ್ಚಂದ್ರ ರಾವ್, ಕಾರ್ಯದರ್ಶಿ**


**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ರೈಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

*Prop. : P. Srikanth Rao*
Mobile : 9343361618
**M/s. SAMARPAN**
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4

Prop. : *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028




ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

## *** ಅಪಾರ ಕೀರ್ತಿ ಗಳಿಸಿ ***



**ಕು। ಪಿ. ವೈಭವಲಕ್ಷ್ಮೀ** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗದ ಪರೀಕ್ಷೆಯಲ್ಲಿ ಶೇಕಡಾ 89.5 (537/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಪ್ರದೀಪ್ ವಿ. ರಾವ್ ಮತ್ತು ಶ್ರೀಮತಿ ರೇಖಾ ರಾವ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಅತ್ತಾವರದ ಸರೋಜಿನಿ ಮಧುಸೂದನ ಕುಶೆ ಕಾಲೇಜಿನ ವಿದ್ಯಾರ್ಥಿನಿ.



**ಕು। ರಶ್ಮಿ ಎನ್.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ (614/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಡಾ. ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ಕರುಣಾರವರ ಸುಪುತ್ರಿ ಹಾಗೂ ಮಂಗಳೂರಿನ ಜೆಪ್ಪು ಸೈಂಟ್ ಜರೋಸಾ ಹೈಸ್ಕೂಲಿನ ವಿದ್ಯಾರ್ಥಿನಿ.

## ಬೆಳುವಾಯಿ 'ಜನ ಔಷಧಿ ಕೇಂದ್ರ' ಉದ್ಘಾಟನೆ



ನಮ್ಮ ದೇಶದ ಪ್ರಧಾನಿ ಮೋದೀಜಿಯವರ ಪರಿಕಲ್ಪನೆ, ಯೋಚನೆ, ಯೋಜನೆಯ 'ಪ್ರಧಾನಮಂತ್ರಿ ಭಾರತೀಯ ಜನ ಔಷಧಿ ಕೇಂದ್ರ' ಸಾಮಾನ್ಯ ಜನರಿಗೂ ಕೈಗೆಟಕುವ ದರದಲ್ಲಿ ಬಿಡುಗಡೆಯಾಗಿರುವುದು ಬಡವರ ಪಾಲಿಗೆ ಆರೋಗ್ಯವರ್ಧಕ ದಿವ್ಯೌಷಧಿ ಯಾಗಿರುತ್ತದೆ. ಇಂತಹ ಜನ ಔಷಧಿ ಕೇಂದ್ರವೊಂದು ಬೆಳುವಾಯಿಯಂತಹ ಹಳ್ಳಿ ಪ್ರದೇಶದಲ್ಲಿ ಅನೇಕ ಜನರಿಗೆ ಉಪಯುಕ್ತ ಹಾಗೂ ಯೋಗ್ಯ ಪರಿಣಾಮ ಬೀರಲಿದೆ ಎಂದು ಜ್ಯೋತಿಷಿ ಹಾಗೂ ಅರ್ಚಕರಾದ ದರೆಗುಡ್ಡೆ ಶ್ರೀ ನಾಗರಾಜ ಭಟ್ ಇವರು ಬೆಳುವಾಯಿಯ ಸೆಂಟ್ರಲ್ ಕಾಂಪ್ಲೆಕ್ಸ್‌ನಲ್ಲಿ ದೀಪಪ್ರಜ್ವಲನೆಗೊಳಿಸಿ ಶುಭವಚನವಿತ್ತರು. ಜೊತೆಗೆ ಬೆಳುವಾಯಿ ಕೆನರಾ ಬ್ಯಾಂಕ್‌ನ ಪ್ರಬಂಧಕರಾದ ಶ್ರೀ ಮನೋಹರ ನಾಯ್ಕ್, ಅಕ್ಷರ ಆಯುರ್ವೇದ ಕ್ಲಿನಿಕ್‌ನ ಡಾ। ಬಾಲಸುಬ್ರಹ್ಮಣ್ಯ ಕೆ. ಆಚಾರ್ಯ, ಕಾಂತಾವರ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ನಿರಂಜನ ಮೊಗಸಾಲೆ, ಉಪನ್ಯಾಸಕರಾದ ಡಾ। ಶ್ರುತಕೀರ್ತಿರಾಜ ಉಜಿರೆ, ಶುಭವರ್ಣ ಸಂಸ್ಥೆಯ ಸ್ಥಾಪಕರಾದ ಕಲಾವಿದ ಶ್ರೀ ಲಕ್ಷ್ಮಣ ಮರಕಡ, ಸುಜಾತ ಎಲೆಕ್ಟ್ರಿಕಲ್ಸ್‌ನ ಮ್ಹಾಲಕರಾದ ಶ್ರೀ ರವಿಪ್ರಸಾದ್ ಕೆ. ಶೆಟ್ಟಿ ಮೂಡಬಿದಿರೆ, ಚೈತ್ರ ಕಲಾಆರ್ಟ್ಸ್‌ನ ಶ್ರೀ ಸುರೇಶ್ ರಾವ್ ಬಿ., ಸೆಂಚುರಿ ಎಲೆಕ್ಟ್ರೋನಿಕ್ಸ್‌ನ ಶ್ರೀ ಹರೀಶ್ ಎಂ. ಬಂಗೇರ ಬೆಳುವಾಯಿ ಇವರ ಉಪಸ್ಥಿತಿಯಿಂದ ಜರಗಿದ ಈ ಕಾರ್ಯಕ್ರಮದಲ್ಲಿ ಮ್ಹಾಲಕರಾದ ಶ್ರೀ ಎಂ. ದೇವಾನಂದ ಭಟ್ ಬೆಳುವಾಯಿ ಸ್ವಾಗತಿಸಿದರು. ಹಿರಿಯ ಕಲಾಸಂಘಟಕ ಶ್ರೀ ಮಹಾವೀರ ಪಾಂಡಿ ಕಾಂತಾವರ ಇವರು ಧನ್ಯವಾದವಿತ್ತರು.

***ಫೋಟೋ : ಶೋಭಾ ಸ್ಟುಡಿಯೋ ಬೆಳುವಾಯಿ***

## ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ರಾವ್‌ರವರಿಗೆ 'ಸಂಯುಕ್ತ ಯಕ್ಷಮಿತ್ರರು' ಇವರಿಂದ ಸನ್ಮಾನ



ಶ್ರೀಮತಿ ಪುಷ್ಪಾವತಿ ಶ್ರೀನಿವಾಸರವರು ಸರಕಾರಿ (ಫಿಶರಿಸ್) ಹಿರಿಯ ಪ್ರಾಥ ಶಾಲೆ, ಚಿತ್ರಾಪುರ, ಕುಳಾಯಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಐದು ವರ್ಷ ಕಳೆದ ಪ್ರವೃತ್ತರಾಗಿದ್ದು ತಾನು ಸೇವೆ ಸಲ್ಲಿಸಿದ ಶಾಲೆಗೆ ತಮ್ಮ ತನು-ಮನ-ಧನದಿಂದ ಸರ ಶಾಲೆಯ ಬೆನ್ನೆಲುಬಾಗಿ ನಿಂತು ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಫಲಾ ಇಲ್ಲದೆ ವಿವಿಧ ಸಮಾಜೋಪಯೋಗಿ ಕಾರ್ಯಗಳಲ್ಲಿ ತೊಡಗಿಸಿಕೊಂಡ ಇ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಚಿತ್ರಾಪುರದ "ಸಂಯುಕ್ತ ಯಕ್ಷಮಿತ್ರರು" ಇ ಸರ್ವಸದಸ್ಯರು 05-09-2020ರಂದು ಶಿಕ್ಷಕರ ದಿನಾಚರಣೆ ಪ್ರಯುಕ್ತ ನೆನ ಕಾಣಿಕೆ, ಶಾಲು ಹೊದಿಸುವುದರೊಂದಿಗೆ ಅದ್ದೂರಿಯಾಗಿ ಸನ್ಮಾನಿಸಿ ಅಭಿನಂದನಾ ನೀಡಿ ಗೌರವಿಸಿದರು.

## ಬಿ.ಜೆ.ಪಿ. ಪ್ರಕೋಷ್ಠಕ್ಕೆ ಆಯ್ಕೆ



ಉಡುಪಿ ಜಿಲ್ಲಾ ಬಿ.ಜೆ.ಪಿ. ಪಂಚಾಯತ್‌ರಾಜ್ ಪ್ರಕೋಷ್ಠದ ಸಹಸಂಚಾಲಕರಾಗಿ **ಶ್ರೀ ಶ್ರೀನಿವಾಸ ಶರ್ಮ ಪಡುಬಿದ್ರೆ** ಆಯ್ಕೆಯಾಗಿರುತ್ತಾರೆ.


*Sri Hari Adyapady*
*Proprietor*



Ph : 0824-2251597 (R
2252119 (O
Mobile : 9448344461
996407248

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***



ಪತ್ರಿಕೆಗೆ ಶುಭ ಬಯಸುವ-



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ -

**G. K. KOLPE**
**House No. 7-3-31-D1,'Vaishnavi' (Upstairs)**
**Vadiraja 2nd Cross, Bailakere, Udupi - 576 101**
**Mobile : 9449903002**



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ : ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. LAXMI PRASAD**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalo**
**Flat No. 103, Deepa Residency, Near Preethi Apartmen**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997  E-mail : laxmiprasad5010@gmail.co

# ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರ ವರ್ಧಂತಿ ದಿನದ ಅನುಗ್ರಹ ಭಾಷಣ



**ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ 28ನೇ ವರ್ಧಂತಿಯನ್ನು 2020ರ ಜುಲೈ 25ರಂದು ಶೃಂಗೇರಿಯ ನರಸಿಂಹವನದ 'ಗುರುನಿವಾಸ'ದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಆ ಸಂದರ್ಭದಲ್ಲಿ ಶ್ರೀ ಸನ್ನಿಧಾನಂಗಳವರು ಮಾಡಿದ ಅನುಗ್ರಹ ಭಾಷಣ.**

ಬಹಳ ಹಿಂದಿನಿಂದಲೂ ನಾವು ಸನಾತನ ಹಿಂದೂ ಧರ್ಮದ ಅನುಯಾಯಿಗಳಾಗಿದ್ದೇವೆ. ಈ ಭರತಭೂಮಿಯಲ್ಲಿ ನಮ್ಮ ಪೂರ್ವಜರಾದ ಮಹರ್ಷಿಗಳು ಮತ್ತು ಮಹಾತ್ಮರು ಧರ್ಮಕ್ಕೆ ಪ್ರಾಧಾನ್ಯವನ್ನು ನೀಡಿ ತಮ್ಮ ಧರ್ಮಕ್ಕೆ (ಸ್ವಧರ್ಮ) ಅನುಗುಣವಾಗಿ ಜೀವನವನ್ನು ನಡೆಸಿದರು. ಅಲ್ಲದೆ, ಬೇರೆಯವರಿಗೆ ಯಾವ ತೊಂದರೆಯನ್ನೂ ಕೊಟ್ಟವರಲ್ಲ. ಬೇರೆಯವರು ಹಿಂಸಿಸಿದಾಗಲೂ ಆತ್ಮರಕ್ಷಣೆ ದೃಷ್ಟಿಯಿಂದ ಮಾತ್ರ ಪ್ರತೀಕಾರವನ್ನು ಮಾಡುತ್ತಿದ್ದರು. ಸಾತ್ತ್ವಿಕ ಜೀವನವನ್ನು ನಡೆಸಿದ್ದರಿಂದಲೇ ಅವರು ನಮ್ಮ ಗೌರವಕ್ಕೆ ಪಾತ್ರರಾಗಿದ್ದರು. ಅಂತಹ ಶ್ರೇಷ್ಠ ಪ್ರಾಚೀನರ ಸಂತತಿಯವರಾಗಿದ್ದೇವೆ ನಾವು.

ಈ ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಎರಡು ರೀತಿಯ ಆಸೆಗಳು ಇರುತ್ತವೆ. ಒಂದು ಸಂತೋಷದಿಂದ ಇರಬೇಕೆಂಬುದು, ಮತ್ತೊಂದು ಕಷ್ಟದಿಂದ ದೂರವಾಗಿರುವುದು. ಧರ್ಮವನ್ನು ಪಾಲಿಸಿದರೆ ಸುಖ-ಸಂತೋಷ ಲಭಿಸುವುದು. ಅಧರ್ಮವನ್ನು ತ್ಯಜಿಸಿದರೆ ಕಷ್ಟ ನಿವಾರಣೆಯಾಗುವುದು. ಧರ್ಮದ ವ್ಯಾಖ್ಯಾನ ಈ ರೀತಿ ಇದೆ. ನಮಗೆ ಒಳಿತನ್ನು ಮಾಡುವುದು. ಧರ್ಮವನ್ನು ಪಾಲಿಸಬೇಕೆಂದು ಶಾಸ್ತ್ರಗಳು ಆದೇಶ ಮಾಡಿರುವುದು. ಶಾಸ್ತ್ರಗಳಲ್ಲಿ ಪರಿಣತರಾದ ವಿದ್ವಾಂಸರ ಮತ್ತು ಹಿರಿಯರ ನಡವಳಿಕೆ, ಇವು ತಾತ್ಕಾಲಿಕವಾಗಿ ಕಷ್ಟಗಳನ್ನು ಉಂಟುಮಾಡಿದ್ದರೂ ಕೊನೆಯಲ್ಲಿ ಶಾಶ್ವತ ಆನಂದವನ್ನು ಉಂಟುಮಾಡುವುದು.

ಕೊನೆಯಲ್ಲಿ ಕಷ್ಟವನ್ನು ತರುವುದೇ ಅಧರ್ಮಾಚರಣೆ ಶಾಸ್ತ್ರಗಳು. ಗುರು ಮತ್ತು ಹಿರಿಯರು ಈ ಅಧರ್ಮವನ್ನು ನಿಷೇಧಿಸಿರುತ್ತಾರೆ. ಅಧರ್ಮವು ಪ್ರಾರಂಭದಲ್ಲಿ ಸುಖವನ್ನು ನೀಡಿ ಅಂತ್ಯದಲ್ಲಿ ದುಃಖಕ್ಕೆ ಕಾರಣವಾಗುವುದು. ಕೆಲವರ ಪ್ರಶ್ನೆ ಹೀಗಿರುತ್ತದೆ. "ಧರ್ಮವನ್ನು ಆಚರಿಸುವುದೇ ಕಷ್ಟಕರವಾಗಿರಬೇಕಾದರೆ ಅಂತಹ ಧರ್ಮವನ್ನು ಏಕೆ ಆಚರಿಸಬೇಕು? ಅಧರ್ಮಿಗಳು ಸುಖವಾಗಿಯೇ ಇರುತ್ತಾರೆ. ಅಂದ ಮೇಲೆ ಅವರಂತೆ ನಾವು ಅಧರ್ಮವನ್ನು ಮಾಡಿ ಸುಖವಾಗಿರಬಹುದಲ್ಲವೇ?" ಅಂತಹ ಪ್ರಶ್ನೆಗಳು ಉದ್ಭವಿಸುವುದಕ್ಕೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಕಾರಣ. ಒಬ್ಬನು ಧಾರ್ಮಿಕನಾಗಿದ್ದರೂ ಕಷ್ಟವನ್ನು ಅನುಭವಿಸುತ್ತಿದ್ದರೆ ಅದಕ್ಕೆ ಅವನು ಧಾರ್ಮಿಕನಾಗಿರುವುದು ಕಾರಣವಲ್ಲ. ಅವನು ಹಿಂದೆ ತಿಳಿದೋ ತಿಳಿಯದೆಯೋ ಮಾಡಿದ ಅನೇಕ ಪಾಪಕರ್ಮಗಳ ಫಲವನ್ನು ಅನುಭವಿಸಬೇಕಾಗಿದೆಯಷ್ಟೆ. ಈಗ ಧಾರ್ಮಿಕನಾಗಿರುವುದರ ಫಲವನ್ನೂ ಅವನು ಅನುಭವಿಸುತ್ತಾನೆ.

ಅಂತೆಯೇ ಅಧರ್ಮವನ್ನು ಮಾಡುವವನು ಸುಖವಾಗಿದ್ದರೆ, ಅಧರ್ಮವು ಅವನಿಗೆ ಸುಖವನ್ನುಂಟುಮಾಡಿದೆ ಎಂದರ್ಥವಲ್ಲ. ಅವನು ಹಿಂದಿನ ಜನ್ಮಗಳಲ್ಲಿ ಪುಣ್ಯಕಾರ್ಯಗಳನ್ನು ಮಾಡಿದ್ದನು ಎಂದು ತರ್ಕಿಸಬೇಕಾಗುತ್ತದೆ. ಆದರೂ, ಸಂತೋಷದ ಕ್ಷಣಗಳನ್ನು ಅನುಭವಿಸಿದ ಮೇಲೆ ಅವನು ಪಾಪಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು. "ಧರ್ಮಾಚರಣೆಯು ಬಹಳ ಕಷ್ಟ. ಅಧರ್ಮವನ್ನು ಮಾಡುತ್ತಲೇ ಸುಖವಾಗಿರಬಹುದು" ಎಂದು ಯಾರೂ ತೀರ್ಮಾನಿಸಬಾರದು. ವಯಸ್ಸಾದ ಮೇಲೆ ಸುಖ-ಸಂತೋಷದಿಂದ ಇರಬೇಕೆನ್ನುವುದಾದರೆ ಬಾಲ್ಯ, ಯೌವನಾವಸ್ಥೆಗಳಲ್ಲಿ ಹಾಗೂ ಶರೀರವು ಬಲಿಷ್ಠವಾಗಿದ್ದಾಗ ಕರ್ತವ್ಯಗಳನ್ನು ನಿರ್ವಹಿಸಿರಬೇಕು. ಆಗ ಮಾತ್ರ ಬದುಕಿನ ಸಂಧ್ಯಾಕಾಲದಲ್ಲಿಯೂ ಅವನು ಸಂತೋಷವಾಗಿರುತ್ತಾನೆ. ಆದ್ದರಿಂದ ಹುಟ್ಟಿದಾಗಿನಿಂದ 25 ವರ್ಷಗಳ ವರೆಗೂ ಮಾನವನು ಜ್ಞಾನಾರ್ಜನೆಯಲ್ಲಿ ತೊಡಗಿರಬೇಕು. ತನ್ನ ಅಧ್ಯಯನ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡ ಅನಂತರ ಆ ಕ್ಷೇತ್ರದಲ್ಲಿ ವಿದ್ವಾಂಸನಾಗಲು ಅವಿರತವಾಗಿ ಪ್ರಯತ್ನಿಸಬೇಕು. ಆಯ್ಕೆಯ ಕ್ಷೇತ್ರವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. ಒಬ್ಬನು ವೈದ್ಯನಾಗಲು ಬಯಸಿರಬಹುದು, ಹಾಗೆಯೇ ಇಂಜಿನಿಯರ್, ಯೋಧ, ಪೊಲೀಸ್ ಅಧಿಕಾರಿ, ವಕೀಲ, ವೇದ ಹಾಗೂ ಶಾಸ್ತ್ರಗಳ ಪಂಡಿತ ಅಥವಾ ಸಂಗೀತದಲ್ಲಿ ಪರಿಣತನಾಗಲು ಇಚ್ಛಿಸಿರಬಹುದು. ಯಾವುದೇ ವ್ಯಕ್ತಿಯಾದರೂ ಚಿಕ್ಕಂದಿನಿಂದಲೇ ಹೆಚ್ಚಿನ ಪರಿಶ್ರಮವನ್ನು ಹಾಕಬೇಕು. ಆಗ ಮಾತ್ರ ಆ ವಿಷಯದಲ್ಲಿ ಪ್ರಭುತ್ವವನ್ನು ಸಾಧಿಸಬಲ್ಲ. ತನ್ನ ಪಾಂಡಿತ್ಯವನ್ನು ಹಾಗೂ ಅನುಭವವನ್ನು ಘನವಾದ ಸದುದ್ದೇಶಕ್ಕೆ ಉಪಯೋಗಿಸಿದರೆ ಅವನು ಸಮಾಜಕ್ಕೆ ಸೇವೆ ಮಾಡಿ ಕೃತಾರ್ಥನಾಗುವನು. ಹೀಗೆ ಅನೇಕ ವರ್ಷಗಳ ವರೆಗೆ ಕೆಲಸಮಾಡಿ ಗುರಿಯನ್ನು ಸಾಧಿಸಿ ನಿವೃತ್ತಿಯನ್ನು ಹೊಂದಿದರೆ ವಯಸ್ಸಾದ ಮೇಲೂ ಸಂತೋಷವಾಗಿರಬಹುದು.

ಆದ್ದರಿಂದಲೇ ಶಾಸ್ತ್ರದಲ್ಲಿ ಈ ಮಾತು ಇದೆ

**"ಬಾಲ್ಯೇವಯಸಿ ತತ್ಕುರ್ಯಾತ್ ಯೇನ ವೃದ್ಧಃ ಸುಖಂ ವಸೇತ್ ।"**

ಆದರೂ ಒಂದು ಪ್ರಶ್ನೆಯು ಹಾಗೆಯೇ ಉಳಿದಿರುತ್ತದೆ. "ವಯಸ್ಸಾದ ಮೇಲೆ ಒಂದು ದಿನ ಮರಣ ಹೊಂದಲೇಬೇಕು. ಈ ಬದುಕಿನಲ್ಲಿ ನಾವು ಗಳಿಸಿದ ಹಣ ಮತ್ತು ಕೀರ್ತಿ ಶರೀರ ತ್ಯಾಗವಾದ ಮೇಲೆ ನಮ್ಮ ಜೊತೆ ಬರುವುದಿಲ್ಲ. ಮುಂದಿನ ಲೋಕದಲ್ಲಿ ಸುಖ ಬೇಕು ಎನ್ನುವುದಾದರೆ ಈಗ ನಾವು ಏನು ಮಾಡಬೇಕು?"

ಅದಕ್ಕೆ ಶಾಸ್ತ್ರಗಳ ಉತ್ತರ ಹೀಗೆ ಇದೆ. **"ಯಾವಜ್ಜೀವಂ ಚ ತತ್ಕುರ್ಯಾತ್ ಯೇನ ಆಮುತ್ರ ಸುಖಂ ವಸೇತ್ ॥"** ವಯಸ್ಸಾದ ಮೇಲೆ ಸುಖವಾಗಿರಲು ಚಿಕ್ಕವಯಸ್ಸಿನಲ್ಲಿ ಶ್ರಮಪಡುವುದು ಹೇಗೆ ಆವಶ್ಯಕವೋ ಅದೇ ರೀತಿ ಈ ದೇಹತ್ಯಾಗವಾದ ಮೇಲೂ ನಾವು ಸುಖವಾಗಿರಬೇಕೆನ್ನುವುದಾದರೆ ಇನ್ನೊಂದು ಲೋಕಕ್ಕೆ ಹೋಗಿ ಪುನಃ ಹುಟ್ಟಲು ಜೀವಮಾನವಿಡೀ ಧರ್ಮವನ್ನು ಆಚರಿಸಬೇಕು. ಈ ದೇಹವನ್ನು ತ್ಯಾಗಮಾಡಿ ಮುಂದಿನ ಲೋಕಕ್ಕೆ ಹೊರಟುಹೋದಾಗ ಮೊದಲು ಲೆಕ್ಕಕ್ಕೆ ಬರುವುದು ಇಲ್ಲಿ ನೀವು ಎಷ್ಟರ ಮಟ್ಟಿಗೆ ಧಾರ್ಮಿಕರಾಗಿದ್ದೀರಿ ಎನ್ನುವುದು. ನಾವು ಆಚರಿಸಿದ ಧರ್ಮದ ಆಧಾರದ ಮೇಲೆ ಪ್ರತಿಫಲ ಸಿಗುವುದು. ದೇವರು ನಮ್ಮ ಧರ್ಮಕ್ಕೆ ಅನುಗುಣವಾಗಿ ಮುಂದಿನ ಲೋಕವನ್ನು ಕರುಣಿಸುವನು. ಆದ್ದರಿಂದ ಧರ್ಮವನ್ನು ಆಚರಿಸುವುದು ಅತ್ಯಾವಶ್ಯಕ. ಬಾಲ್ಯದಿಂದ ಹಿಡಿದು ದೇಹತ್ಯಾಗದ ವರೆಗೂ ನಾವು ಮಾಡಲೇಬೇಕಾಗಿರುವ ಧರ್ಮಗಳನ್ನು ಶಾಸ್ತ್ರಗಳು ಪಟ್ಟಿಮಾಡಿವೆ.

ಈ ಬದುಕಿನಲ್ಲಿ ಮಾಡಿದ ಕೆಲವು ಧರ್ಮಗಳ ಫಲಗಳನ್ನು ಇಲ್ಲೇ ಅನುಭವಿಸಬಹುದು. ಇನ್ನು ಕೆಲವನ್ನು ಬೇರೆ ಲೋಕಗಳಲ್ಲಿ ಮುಂದಿನ ಜನ್ಮಗಳಲ್ಲೂ ಅನುಭವಿಸಬಹುದು. ಆದ್ದರಿಂದ ನಾವು ಧರ್ಮಕ್ಕೆ ಪ್ರಾಶಸ್ತ್ಯವನ್ನು ನೀಡಬೇಕು. ಪ್ರತಿಯೊಬ್ಬರೂ ತಮ್ಮ ದಿನಚರಿಯನ್ನು ಎರಡು ಭಾಗ ಮಾಡಬೇಕು. ಒಂದು ಭಾಗವನ್ನು ತನ್ನ ಬದುಕನ್ನು ಉಳಿಸಿಕೊಳ್ಳಲು ಬೇಕಾದ ಕರ್ಮಗಳನ್ನು ಮಾಡಲು, ಮತ್ತೊಂದು ಭಾಗವನ್ನು ಆಧ್ಯಾತ್ಮಿಕ ಉನ್ನತಿ ಸಾಧಿಸಲು ಮಾಡಬೇಕಾದ ಧಾರ್ಮಿಕ ಕ್ರಿಯೆಗಳನ್ನು ಮಾಡಲು. ಈ ಅಭ್ಯಾಸವನ್ನು ಪ್ರತಿನಿತ್ಯ ಮಾಡುವುದರಿಂದ ಜೀವನವು ಸಾರ್ಥಕವಾಗುತ್ತದೆ.

ಆದಿಶಂಕರಾಚಾರ್ಯರು ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠವನ್ನು ಧರ್ಮ ಪ್ರಚಾರ ಮಾಡಲು ಸ್ಥಾಪಿಸಿದ್ದು ಅದು ಅವಿಚ್ಛಿನ್ನ ಗುರುಪರಂಪರೆಯನ್ನು ಹೊಂದಿದೆ. ನಮ್ಮ ಗುರುಗಳಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು 36ನೇ ಪೀಠಾಧಿಪತಿಗಳಾಗಿದ್ದು ಎಲ್ಲರ ಗೌರವಕ್ಕೆ ಪಾತ್ರರಾಗಿ ಭಕ್ತರನ್ನು ಆಶೀರ್ವದಿಸಿದ್ದಾರೆ. ಈ ಶಾರದಾಪೀಠವು ಅವಿಚ್ಛಿನ್ನ ಗುರುಪರಂಪರೆಯನ್ನು ಹೊಂದಿರುವಂತೆ, ಅವಿಚ್ಛಿನ್ನ ಶಿಷ್ಯಪರಂಪರೆಯನ್ನೂ ಹೊಂದಿದ್ದು, ಭಕ್ತರು ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದೆಲ್ಲೆಡೆ ನೆಲೆಸಿದ್ದಾರೆ. ಅನೇಕ ಜನರು ತಮ್ಮ ಕುಟುಂಬದ ಪರಂಪರೆಯಂತೆ ನಮ್ಮ ಗುರುಗಳ ಸೇವೆಯನ್ನು ಮಾಡುತ್ತಿದ್ದಾರೆ. ನಮ್ಮ ಗುರುಗಳ ಎರಡು ತಿಂಗಳ ಚಾತುರ್ಮಾಸ್ಯ ಅವಧಿಯನ್ನು ಅತ್ಯಂತ ಶ್ರೇಯಸ್ಕರವೆಂದು ಭಾವಿಸಿ ಆ ಅವಧಿಯಲ್ಲಿ ಶೃಂಗೇರಿಗೆ ಅಥವಾ ಗುರುಗಳು ಚಾತುರ್ಮಾಸ್ಯ ವ್ರತವನ್ನು ನಡೆಸುತ್ತಿರುವ ಸ್ಥಳಕ್ಕೆ ತಪ್ಪದೇ ಬಂದು ಗುರುದರ್ಶನ ಮಾಡಿ ಆಶೀರ್ವಾದವನ್ನು ಪಡೆದು ಅನಂತರ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಇದು ಸಂಪ್ರದಾಯ. ಕೆಲವು ಭಕ್ತರು ಪ್ರತಿ ಚಾತುರ್ಮಾಸ್ಯದಲ್ಲೂ ಗುರುಗಳ ದರ್ಶನ ಪಡೆಯಲು ಬರುತ್ತಾರೆ.

ಆದರೆ ಈ ವರ್ಷ ದೇಶದಲ್ಲಿ ಅನಿರೀಕ್ಷಿತ ಪರಿಸ್ಥಿತಿ ಉದ್ಭವಿಸಿದೆ. ಕೊರೋನಾ ಸಾಂಕ್ರಾಮಿಕ ರೋಗ, ಅದು ದೂರ ದೇಶದಲ್ಲಿ ಪ್ರಾರಂಭವಾದರೂ ಶಾಂತಿ ಮತ್ತು ಆರೋಗ್ಯವಂತವಾಗಿದ್ದ ನಮ್ಮ ದೇಶಕ್ಕೂ ಹರಡಿ ಲಕ್ಷಾಂತರ ಜನರನ್ನು ಪೀಡಿಸುತ್ತಿದೆ. ತತ್ಪರಿಣಾಮವಾಗಿ ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿಯಲ್ಲಿ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಈ ರೋಗವು ವ್ಯಾಪಕವಾಗಿ ಹರಡುತ್ತಿರುವುದು ಆತಂಕಕ್ಕೆ ಕಾರಣವಾಗಿದ್ದರೂ ರೋಗದಿಂದ ಗುಣವಾಗುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ಅದಕ್ಕೆ ಭಗವಂತನ ಅನುಗ್ರಹವೂ ಅಹರ್ನಿಶಿ ದುಡಿಯುತ್ತಿರುವ ಕೊರೋನಾ ಯೋಧರೂ ಕಾರಣ. ಅವರಿಂದ ಪರಿಸ್ಥಿತಿಯು ಇನ್ನಷ್ಟು ಉತ್ತಮವಾಗಲಿದೆ.

ಪ್ರತಿಯೊಬ್ಬರೂ ಎಚ್ಚರದಿಂದ ಇದ್ದು ನಿಯಮಗಳನ್ನು ಅನುಸರಿಸಬೇಕಾಗಿರುವುದರಿಂದ ಭಕ್ತರು ಗುರುಗಳ ದರ್ಶನಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಭಕ್ತರು ತಾವಿರುವ ಸ್ಥಳದಲ್ಲೇ ಮಾನಸಭಕ್ತಿಯಿಂದ ತಾಯಿ ಶಾರದೆಯನ್ನೂ, ನಮ್ಮ ಗುರುಗಳನ್ನೂ ನಮಿಸಲಿ.

ಎಲ್ಲ ಭಕ್ತರಿಗೂ ನಮ್ಮ ಆಶೀರ್ವಾದಗಳು. ರೋಗಪೀಡಿತರು ಬೇಗ ಗುಣಹೊಂದಲಿ ಎಂದು ಶ್ರೀ ಶಾರದಾಚಂದ್ರಮೌಳೀಶ್ವರ ಮತ್ತು ಗುರುಗಳಲ್ಲಿ ಪ್ರಾರ್ಥಿಸುತ್ತೇವೆ.

**ಮಾಹಿತಿ ಮತ್ತು ಕೃಪೆ : ಅದ್ವೈತ ಶೋಧ ಕೇಂದ್ರ, ಶೃಂಗೇರಿ**


*Manish Rao U.*

Tel : (O) 2223301
Mobile : 9448726499 / 8884284939

**NAVA COMPUTERS**



**Dealers in : C. C. Camera, Theft Alarm, Remote Locks**
**Computers Hardware and Peripherals**
**Computer Sales & Services**

**1st Floor, Bharath Building, P. M. Rao Road, Hampankatta, Mangaluru - 575 001**

Muralidhara Rao Adyapadi
Proprietor

Mob : 94480 27259
99803 16434



**SPANDANA**
Constructions

**IInd Floor (202)**
**'Yashodharathna', Sai Sharada Apts.**
**Near Sharada Vidyalaya, Kodialbail , Mangaluru - 3**

CUSTOMER'S SATISFACTION IS OUR MOTTO





## ಜ್ಞಾನ – ನುಡಿ

ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ. ಇಲ್ಲವಾದರೆ ನಮ್ಮ ಮನಸ್ಸನ್ನು ಸದೃಢವಾಗಿ ಮತ್ತು ಶುದ್ಧ ಅಂತಃಕರಣದಿಂದ ಇಟ್ಟುಕೊಳ್ಳಲು ಸಾಧ್ಯವಾಗದು. **– ಗೌತಮ ಬುದ್ಧ**

## ಜ್ಞಾನ – ಗಾದೆ

- ತೆರಿನಾಯನೊ ಗುಣ ಮಲ್ಲಿಗೆ ಪೂತ ಲೆಕ್ಕ.
- ತೆರಿನಕ್ಲೆನ ಪಾತೆರ ಬೆಲ್ಲ ಲೆಕ್ಕ.
- ತಂಞಣಕ್ ಗಾಳಿ ಪಾಡಿ ಲೆಕ್ಕ.

## ಜ್ಞಾನ – ನಗೆ

**ಭೀಮಣ್ಣ :** ಮದುವೆಯಾದ ನಂತರ ಮನೆಯಲ್ಲಿ ನಿನ್ನ ಜವಾಬ್ದಾರಿ ಜಾಸ್ತಿ ಆಯಿತಲ್ಲವೇ?

**ಶಾಮಣ್ಣ :** ಹೌದು. ಮದುವೆಗೆ ಮೊದಲು ಒಬ್ಬನಿಗೇ ಅಡುಗೆ ಮಾಡಿ ಕೊಳ್ಳುತ್ತಿದ್ದೆ. ಈಗ ಅದರ ಎರಡರಷ್ಟು ಮಾಡಬೇಕಾಗಿದೆ!

## ಜ್ಞಾನ – ವಿಸ್ಮಯ

ಇಟಲಿಯಲ್ಲಿ ದಂಪತಿ ತಮ್ಮ ಮಗುವಿಗೆ ಇಟ್ಟ ಹೆಸರು ಈಗ ಕೋರ್ಟ್ ಮೆಟ್ಟಲೇರಿದೆ. ಆ ದಂಪತಿ ಹೆಣ್ಣುಮಗುವಿಗೆ "ಬ್ಲೂ" ಎಂದು ಹೆಸರಿಟ್ಟಿದ್ದು ಇದು ಹೆಣ್ಣುಮಕ್ಕಳಿಗೆ ಇಡುವ ಹೆಸರಲ್ಲ. ಇದನ್ನು ಬದಲಿಸದಿದ್ದರೆ ತಾನೇ ಹೊಸ ಹೆಸರು ಇಡುವುದಾಗಿ ಕೋರ್ಟ್ ಆದೇಶ ನೀಡಿದೆಯಂತೆ!

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*